# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
# ಹಿರಿಯ ಶ್ರೇಣಿ, ತೀರ್ಥಹಳ್ಳಿ
# ಸಿ.ಸಿ. ನಂ. 473/2024

| | | |
|---|---|---|
| ಸಾಕ್ಷಿದಾರರ ಹೆಸರು | ಬಸವರಾಜ್ ಎಲ್.ಆರ್. | |
| ತಂದೆಯ ಹೆಸರು | ರಾಜಶೇಖರಯ್ಯ | ಸಿಡಬ್ಲ್ಯೂ-1 |
| ವಯಸ್ಸು | 60 ವರ್ಷ | ಪಿಡಬ್ಲ್ಯೂ-1 |
| ಉದ್ಯೋಗ | ನಿವೃತ್ತ ಪೊಲೀಸ್ ಸಬ್ ಇನ್ಸಪೆಕ್ಟರ್ | |
| ವಾಸಸ್ಥಳ | ಮೇಟಿಕುಡಿಗೆ, ಹಿರಿಯೂರು ತಾಲ್ಲೂಕು | |

ದಿಃ17-06-2025 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ಮಾರ್ಚ್ 2024 ರಿಂದ ಜೂನ್ 2024 ರವರೆಗೆ ಆಗುಂಬೆ ಠಾಣೆಯಲ್ಲಿ ಕರ್ತವ್ಯ ಮಾಡಿದ್ದೇನೆ.

ದಿಃ31-03-2024 ರಂದು ನಾನು ನಮ್ಮ ಠಾಣೆಯ ಸಿಬ್ಬಂದಿಗಳಾದ ಚಾಸಾ-2 ರಿಂದ ಚಾಸಾ-4 ರವರೊಂದಿಗೆ ಠಾಣಾ ಗಸ್ತು ಕರ್ತವ್ಯ ನಿರ್ವಹಿಸುತ್ತಿರುವಾಗ ರಾತ್ರಿ 07.45 ಗಂಟೆಗೆ ರಾಮಚಂದ್ರಾಪುರ ಸರ್ಕಲ್ ಬಳಿ ಇದ್ದಾಗ ನನಗೆ ಬಂದ ಮಾಹಿತಿಯ ಮೇರೆಗೆ ಕಾಸರವಳ್ಳಿ ಗ್ರಾಮದಲ್ಲಿ ವಿನೇಶ್ ರವರ ಕಿರಾಣಿ ಅಂಗಡಿಯ ಮುಂಭಾಗದ ರಸ್ತೆಯಲ್ಲಿ ಯಾರೋ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದಾರೆಂದು ಬಂದ ಮಾಹಿತಿಯ ಮೇರೆಗೆ ಸ್ಥಳಕ್ಕೆ ಪಂಚರಾದ ಚಾಸಾ-7 ಮತ್ತು ಚಾಸಾ-8 ರವರನ್ನು ಬರಮಾಡಿಕೊಂಡು ಪಂಚರಿಗೆ ನೋಟೀಸ್ ಜಾರಿ ಮಾಡಿರುತ್ತೇನೆ. ನಮ್ಮೊಂದಿಗೆ ದಾಳಿ ಮಾಡಲು ಅವರಿಗೆ ತಿಳಿಸಿದ ಮೇರೆಗೆ, ಸಿಬ್ಬಂದಿ ಮತ್ತು ಪಂಚರೊಂದಿಗೆ ರಾತ್ರಿ 08.25 ಗಂಟೆಗೆ ವಿನೇಶ್ ರವರ ಅಂಗಡಿಯ ಮುಂಭಾಗದಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿ ನಮ್ಮನ್ನು ನೋಡಿ

ಓಡಿ ಹೋಗಿರುತ್ತಾನೆ. ನಾವು ಅಲ್ಲಿಗೆ ಹೋದಾಗ 90 ಎಂ.ಎಲ್ ನ 37 ಓರಿಜಿನಲ್ ಚಾಯ್ಸ್ ವಿಸ್ಕಿ ಮದ್ಯದ ಪೌಚುಗಳು ದೊರೆತಿದ್ದು, ಕಿರಾಣಿ ಅಂಗಡಿ ವ್ಯಾಪಾರಕ್ಕೆ ಬಂದಿದ್ದ ನಂದನ್ ಇವರನ್ನು ವಿಚಾರ ಮಾಡಲಾಗಿ, ಓಡಿ ಹೋದ ವ್ಯಕ್ತಿಯ ಹೆಸರನ್ನು ಕೇಳಲಾಗಿ ದಿನೇಶ್ ತಂದೆ ಕೃಷ್ಣಪ್ಪಗೌಡ ಎಂದು ತಿಳಿಸಿದರು. ಸ್ಥಳದಲ್ಲಿ ದೊರೆತ ಮದ್ಯದ ಪೌಚುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಡಲು ಎಲ್ಲಾ ಪೌಚುಗಳನ್ನು ಪಂಚರ ಸಮಕ್ಷಮ ಪಂಚನಾಮೆ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಮಹಜರ್ ನ್ನು 08.25 ರಿಂದ 09.25 ರವರೆಗೆ ಮಾಡಿರುತ್ತೇವೆ. ರಾತ್ರಿ 10.15 ಗಂಟೆಗೆ ಚಾಸಾ–18 ರವರ ಮುಂದೆ ವರದಿ ಸಲ್ಲಿಸಿರುತ್ತೇನೆ. ತಾವು ನೀಡಿದ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ವರದಿಯನ್ನು ನಿಪಿ–1 ಎಂದು, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಸ್ಥಳ ಮಹಜರ್ ನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಮಹಜರ್ ನ್ನು ನಿಪಿ–2 ಎಂದು, ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಫೋಟೊವನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಫೋಟೊವನ್ನು ನಿಪಿ–3 ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ಮದ್ಯದ ಪೌಚುಗಳನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಎಂಒ–1 ಎಂದು ಗುರುತಿಸಲಾಯಿತು. ಭಾರತೀಯ ಸಾಕ್ಷ್ಯ ಅಧಿನಿಯಮ 65(ಬಿ) ಸಾಕ್ಷಿ ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ–4 ಎಂದು, ಸಾಕ್ಷಿಯ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎನ್ ಎಸ್ ಎ ವಕೀಲರಿಂದ**

ಆಗುಂಬೆ ಠಾಣೆಯನ್ನು 07.00 ಗಂಟೆಗೆ ಬಿಟ್ಟಿರುತ್ತೇನೆ. ಆಗುಂಬೆ ಠಾಣೆಯಿಂದ ಘಟನಾ ಸ್ಥಳಕ್ಕೆ ಹೋಗುವಾಗ ಎರಡು ರಸ್ತೆಗಳು ಬರುತ್ತವೆ ಎಂದರೆ ಸರಿ. ಈ ಪ್ರಕರಣದಲ್ಲಿ ನಾನು ತನಿಖೆ ಮಾಡಿರುವುದಿಲ್ಲ. ಕಿರಾಣಿ ಅಂಗಡಿಯಲ್ಲಿ ಪರಿಶೀಲನೆ ಮಾಡಿರುವುದಿಲ್ಲ. ಎಂಒ–1 ಪರಿಶೀಲನೆ ಸಮಯದಲ್ಲಿ ಟೇಬಲ್ ಮೇಲೆ ಇತ್ತು. ಸದರಿ ಟೇಬಲ್ ನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಆರೋಪಿಯು ನಮ್ಮನ್ನು ನೋಡಿ ಓಡಿಹೋದನು. ಮಹಜರ್ ಸಮಯದಲ್ಲಿ ಎಫ್.ಐ.ಆರ್ ದಾಖಲು ಮಾಡಿರುವುದಿಲ್ಲ. ಮಹಜರ್ ನಲ್ಲಿ

ಎಫ್.ಐ.ಆರ್ ನಂಬರ್ ಇರುವುದಿಲ್ಲ ಎಂದರೆ ಸರಿ. ರಾಮಕೃಷ್ಣಪುರ ಸರ್ಕಲ್ ನಿಂದ ಸಾಕ್ಷಿದಾರರನ್ನು ಕರೆದುಕೊಂಡು ಹೋದೆವು. ಸಾಕ್ಷಿದಾರರು ಸರ್ಕಲ್ ನಲ್ಲಿ ಇದ್ದರು. ಸದರಿ ಮದ್ಯವನ್ನು ಯಾರು ಮಾರಾಟ ಮಾಡುತ್ತಿದ್ದರು ಎಂದು ನಾವು ನೋಡಿಲ್ಲ. ಆರೋಪಿಯು ಮದ್ಯದ ಬಾಟಲಿಗಳನ್ನು ಮಾರಾಟ ಮಾಡುತ್ತಿರಲಿಲ್ಲ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಎಂಒ–1 ನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಟೇಬಲ್ ನ್ನು ಅಮಾನತ್ತುಪಡಿಸಿಕೊಳ್ಳದಿರುವ ಬಗ್ಗೆ ಮಹಜರ್ ನಲ್ಲಿ ನಮೂದು ಇರುವುದಿಲ್ಲ. ಆರೋಪಿಗೂ ಈ ಕೇಸಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳನ್ನು ಠಾಣೆಯಲ್ಲಿ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ದಾಖಲೆ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**ತೆ ನ್ಯಾ.ಬೆ ಮಾಡಲಾಯಿತು.**

**ಓ ಹೇ ಕೇ ಸರಿಯಿದೆ.**

**(ಗೀತಾಮಣಿ)**
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ತೀರ್ಥಹಳ್ಳಿ**